**ದಿಃ 23-08-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಃ-</u>** ಶ್ರೀ ಒ ಎ ಎಸ್ **ವಕೀಲರಿಂದಃ**

ನಾನು ಚನ್ನರಾಯಪಟ್ಟಣದ ಕೆ ಎಸ್ ಆರ್ ಟಿ ಸಿ ಡಿಪೋದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆರೋಪಿತರು ನನಗೆ ಸಂಬಂಧಿಕರಾಗಬೇಕೆಂದರೆ ಸರಿ. 1 ನೇ ಆರೋಪಿಯು ನನಗೆ ತಾತನಾಗಬೇಕು. 2 ನೇ ಆರೋಪಿ ನನ್ನ ಅಜ್ಜಿಯಾಗಬೇಕು. 3 ನೇ ಆರೋಪಿ ನನ್ನ ಚಿಕ್ಕಮ್ಮರಾಗಬೇಕು. ಸದರಿ ಪ್ರಕರಣ ದಾಖಲಿಸುವ ಮುಂಚೆ ಆಸ್ತಿಯಲ್ಲಿ ಭಾಗ ಬರಬೇಕೆಂದು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿ. 1 ನೇ ಆರೋಪಿಗೆ 90 ವರ್ಷಗಳಾಗಿರುತ್ತದೆ. 2 ನೇ

ಆರೋಪಿಗೆ 65 ವರ್ಷಗಳಾಗಿರುತ್ತದೆ. 1 ನೇ ಆರೋಪಿಯು ಬೇರೆಯವರ ಸಹಾಯವಿಲ್ಲದೇ ಓಡಾಡಲು ಸಾಧ್ಯವಿಲ್ಲವೆಂದರೆ ಸರಿಯಲ್ಲ. ದಿ:06-07-15 ರಲ್ಲಿ ಜಮೀನು ವಿಚಾರವಾಗಿ 3 ನೇ ಆರೋಪಿಯ ಸೀರೆಯನ್ನು ಎಳೆದಾಡಿ ಅವಮಾನ ಮಾಡಿ, ಕಾಲಿನಿಂದ ಒದ್ದು, ಅವ್ಯಾಚ್ಯ ಶಬ್ದಗಳಿಂದ ಬೈದುದರ ಕಾರಣ ಪ್ರಕರಣ ದಾಖಲಿಸಿ, ಸದರಿ ಪ್ರಕರಣದಲ್ಲಿ ಜಾಮೀನು ಪಡೆದುಕೊಂಡಿರುತ್ತೇನೆಂದರೆ ಸಾಕ್ಷಿಯು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ನಾನು ಜಾಮೀನು ಪಡೆದುಕೊಂಡಿರುತ್ತೇನೆಂದರೆ ಸರಿ.

ಗಲಾಟೆ ಮನೆಯ ಹೊರಗಡೆ ಆಗಿತ್ತೋ ಅಥವಾ ಒಳಗಡೆ ಆಗಿತ್ತೋ ಎಂಬ ಪ್ರಶ್ನೆಗೆ ಸಾಕ್ಷಿಯು ಒಳಗಡೆ ನುಗ್ಗಿ, ನಂತರ ನನ್ನನ್ನು ಹೊರಗಡೆ ಎಳೆದುಕೊಂಡು ಬಂದಿರುತ್ತಾರೆಂದು ನುಡಿಯುತ್ತಾರೆ. 3 ಜನ ಆರೋಪಿತರು ಒಳಗಡೆ ನುಗ್ಗಿರುತ್ತಾರೆ. ನಾನು ಊಟ ಮಾಡುತ್ತಿದ್ದ ತಟ್ಟೆ ಬಿದ್ದಿರುತ್ತದೆ. ನಾನು ನನ್ನ ದೂರಿನಲ್ಲಿ ಮನೆಯಲ್ಲಿ ಆರೋಪಿತರು ನುಗ್ಗಿ ನಾನು ಊಟ ಮಾಡುತ್ತಿದ್ದ ತಟ್ಟೆ ಬಿದ್ದ ಬಗ್ಗೆ ನನ್ನ ದೂರಿನಲ್ಲಿ ಹೇಳಿರುವುದಿಲ್ಲ. ನಾನು ಹೇಳುತ್ತಿದ್ದ ಸಂಗತಿ ಮತ್ತು ನಾನು ನೀಡಿದ ದೂರು ಎರಡೂ ನಿಜವಾಗಿರುತ್ತದೆ. ಆರೋಪಿತರು ಮನೆಯಲ್ಲಿ ನುಗ್ಗಿದಾಗ ಮಾತಿನ ಜಗಳ 5 ನಿಮಿಷ ಆಗಿರುತ್ತದೆ. 1 ನೇ ಆರೋಪಿಯ ಕೈಯಲ್ಲಿ ಕೋಲಿತ್ತು. ಉಳಿದ ಆರೋಪಿತರ ಕೈಯಲ್ಲಿ ಆಯುಧವಿರಲಿಲ್ಲ. ನನ್ನನ್ನು ಮನೆಯ ಹೊರಗಡೆ ಎಳೆದುಕೊಂಡು ಹೋಗಿ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಹಲ್ಲೆ ಮಾಡಿದಾಗ ನನಗೆ ರಕ್ತ ಬಂದಿರುತ್ತದೆ. ಆರೋಪಿತರು ಶರ್ಟು ಹರಿದು ಹಾಕಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಶರ್ಟನ್ನು ನೋಡಿ ಗುರುತಿಸಿದ್ದು ರಕ್ತದ ಗುರುತು ಇಲ್ಲ ಎಂದರೆ ಸರಿಯಲ್ಲ. ದೊಣ್ಣೆಗೆ ರಕ್ತ ತಾಗಿರುವುದಿಲ್ಲ. ಆ ಸಮಯದಲ್ಲಿ ಚಾಸಾ 2 ಹಾಜರಿದ್ದರು.

ಸದರಿ ಗಲಾಟೆ ಜಮೀನು ವಿಚಾರವಾಗಿ ಆಗಿತ್ತು ಎಂದರೆ ಸರಿ. ಕಾಲು ಗಂಟೆ ಗಲಾಟೆಯಾಗಿರುತ್ತದೆ. ಗಲಾಟೆ ಸಮಯದಲ್ಲಿ ನಾನು ನನ್ನ ಚಾಸಾ 2 ರವರನ್ನು ಬಿಟ್ಟು ಯಾರೂ ಸೇರಿರುವುದಿಲ್ಲ. ಸಾಕ್ಷಿ ಮುಂದುವರೆದು ಪಕ್ಕದ ಮನೆಯವರು ಹಾಜರಿದ್ದರು. ಪಕ್ಕದ ಮನೆಯವರು ಪರಿಚಯವಿರುತ್ತಾರೆ. ನಮ್ಮ ಊರಿನಿಂದ ಗಂಡಸಿ ಠಾಣೆ 2 ಕಿ.ಮೀ ಅಂತರವಿರುತ್ತದೆ. ಗಂಡಸಿಯಲ್ಲಿ ಸರ್ಕಾರಿ ಆಸ್ಪತ್ರೆ ಪಕ್ಕದಲ್ಲೆ ಇರುತ್ತದೆ. ಗಲಾಟೆಯಾದ ನಂತರ ನಾನು ಆಸ್ಪತ್ರೆಗೆ ಅರ್ಧ ಗಂಟೆಯಾದ ಮೇಲೆ ಹೋಗಿರುತ್ತೇನೆ. ಚಾಸಾ 7 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಆಸ್ಪತ್ರೆಯಲ್ಲಿ ಒಂದು ದಿನ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಎದೆಗೆ, ತಲೆಗೆ

ಪೆಟ್ಟಾಗಿರುತ್ತದೆ. ನಾನು ಆಸ್ಪತ್ರೆಯಿಂದ ಮಾರನೇ ದಿನ ಬೆಳಗ್ಗೆ 11-00 ಗಂಟೆಗೆ ಡಿಸ್ಚಾರ್ಜ್ ಪಡೆದುಕೊಂಡು ಬಂದಿರುತ್ತೇನೆ. ನಾನು ಠಾಣೆಗೆ ಹೋಗಿರುವುದಿಲ್ಲ. ಪೋಲಿಸರೇ ಆಸ್ಪತ್ರೆಗೆ ಬಂದಿರುತ್ತಾರೆ. ಪೋಲಿಸರು ಆಸ್ಪತ್ರೆಗೆ ಬಂದಾಗ ನಾನು ಹಾಕಿದ ಶರ್ಟನ್ನು ತೆಗೆದುಕೊಂಡು ಹೋಗಿರುತ್ತಾರೆ. ಪೋಲಿಸರು 2 ದಿನದ ನಂತರ ಮಹಜರ್ ಗೆ ಬಂದಿರುತ್ತಾರೆ. ಪೋಲಿಸರು ಮಹಜರ್ ಗೆ ಬಂದಾಗ ಆರೋಪಿತರು ಊರಲ್ಲೇ ಇದ್ದರು. ಮೂ.ಮ 1 ಅಲ್ಲೇ ಹೊರಗಡೆ ಬಿದ್ದಿತ್ತು. ನನ್ನ ಮೇಲೆ ಆರೋಪಿತರು ಪ್ರಕರಣ ದಾಖಲಿಸಿದ ಕಾರಣ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಕೋಲು ಇನ್ನು ಉದ್ದ ಇದ್ದು ಅದನ್ನು ನನಗೆ ಒಡೆದ ನಂತರ ಎರಡು ಭಾಗವಾಗಿರುತ್ತದೆ. ಇನ್ನೊಂದು ಭಾಗ ಸಿಕ್ಕಿಲ್ಲ ಎಂಬ ಬಗ್ಗೆ ನಾನು ಪೋಲಿಸರಿಗೆ ಹೇಳಿಲ್ಲ. ಚಾಸಾ 2 ರವರಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ. ಸದರಿ ಘಟನೆಯ ದಿನ ರಜೆಯಲ್ಲಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ. 1 ನೇ ಆರೋಪಿಯು ವಯಸ್ಸಾಗಿದ್ದು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ಸಿವಿಲ್ ಪ್ರಕರಣದಲ್ಲಿ ಭಾಗಾಂಶ ನೀಡಬೇಕೆಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೆ ಮೂ.ಮ 1 ಮತ್ತು 2 ನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ-</u> ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಸಾ ಓ ಹೇ ಕೇ ಸ ಇ ಒ**

( ಶ್ರೀ ಅಮಿತ್ ಘಟ್ಟಿ)

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**

**ಅರಸೀಕೆರೆ.**